# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಸಕಲೇಶಪುರ

## C.C.No. 80 /2022

| | | |
|---|---|---|
| **ಹೆಸರುಃ** | ಶಶಿಕಲಾ | CW-4 |
| **ತಂದೆ/ಗಂಡ ಹೆಸರುಃ** | ರಾಜೇಗೌಡ | PW-1 |
| **ವಯಸ್ಸು** | 45 ವರ್ಷ | |
| **ವೃತ್ತಿ** | ಮಕ್ಕಳ ಸಹಾಯ ವಾಣಿ ಟೀಮ್ ಮೆಂಬರ್ | |
| **ವಿಳಾಸಃ** | ಕುಪ್ಪಳ್ಳಿ ಹಾಸನ ತಾಲ್ಲೂಕು | **ದಿನಾಂಕಃ17-07-2023** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ ಎ ಪಿ ಪಿ ಯವರಿಂದ

ನಾನು ಮಕ್ಕಳ ಸಹಾಯವಾಣಿ ಕೇಂದ್ರದಲ್ಲಿ ಟೀಮ್ ಮೆಂಬರ್ ಆಗಿ ಸುಮಾರು 11 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ.

1098 ಮಕ್ಕಳ ಸಹಾಯವಾಣಿ ನಂಬರ್ ಗೆ ಕರೆ ಬರುವ ದೂರುಗಳನ್ನು ಅಟೆಂಡ್ ಮಾಡುವುದು ಮತ್ತು ಬಾಲ್ಯ ವಿವಾಹದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ನಿರ್ವಹಿಸುತ್ತಿರುತ್ತೇನೆ.

ದಿಃ 28-06-2021 ರಂದು ಬೆಳಗ್ಗೆ 10 ಗಂಟೆ ಸಮಯದಲ್ಲಿ 1098 ಕ್ಕೆ ಕರೆ ಮಾಡಿ ಹಾನುಬಾಳು ಹೋಬಳಿ, ಹಿರುದಿ ಗ್ರಾಮದಲ್ಲಿ ಆನಂದ ಎಂಬುವರ ಮಗ ಸುನೀಲ್ ಎಂಬುವರು ಲಾವಣ್ಯ ಎಂಬ 15 ವರ್ಷದ ಬಾಲಕಿಯನ್ನು ಬಾಲ್ಯ ವಿವಾಹ ಆಗಿದೆ ಎಂದು ಮಾಹಿತಿ ಬಂದಿದ್ದು, ಆ ದೂರಿನ ಮೇರೆಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿ ಆ ಸಿಬ್ಬಂದಿಗಳ ಜೊತೆ ನಾವು ಸಕಲೇಶಪುರ ಶಿಶು ಅಭಿವೃದ್ಧಿ ಕಛೇರಿಗೆ ಬಂದು ಅಲ್ಲಿನ ಮೇಲ್ವಿಚಾರಕಿ ಚಾಸಾ-3 ರವರಿಗೆ ವಿಷಯ ತಿಳಿಸಿ ನಂತರ ಗ್ರಾಮಾಂತರ ಠಾಣೆ ಸಕಲೇಶಪುರ ಇವರಿಗೆ ಮಾಹಿ ನೀಡಿ ನಾವು 1 ನೇ ಆರೊಪಿ ಮನೆಗೆ ಹೋಗಿರುತ್ತೇವೆ. ಆಗ ಮನೆಯಲ್ಲಿ 1 ನೇ ಆರೋಪಿ , ಆತನ ಅಜ್ಜಿ ಮತ್ತು ಅಪ್ರಾಪ್ತ ಬಾಲಕಿ ಮತ್ತು ಆಕೆಯ ತಾಯಿ ಇದ್ದರು. ನಾವು ವಿಚಾರಣೆ ಮಾಡಿದಾಗ ಅವರುಗಳು ಬಾಲ್ಯ ವಿವಾಹ ಮಾಡಿದ ಬಗ್ಗೆ ಒಪ್ಪಿಕೊಂಡಿರುವುದಿಲ್ಲ ಹಾಗೂ ಬಾಲ್ಯ ವಿವಾಹದ ಬಗ್ಗೆ ನಮಗೆ ಯಾವುದೇ ದಾಖಲಾತಿ

ದೊರಕಿರುವುದಿಲ್ಲ. ನಾವು ಬಾಲಕಿಯಾದ ಲಾವಣ್ಯ ಳನ್ನು ಮಕ್ಕಳ ಕಲ್ಯಾಣ ಸಮಿತಿ, ಹಾಸನ ಇಲ್ಲಿಗೆ ಕರೆದುಕೊಂಡು ಹೋಗಿರುತ್ತೇವೆ. ಅವರ ಆದೇಶದ ಮೇರೆಗೆ ತೆರೆದ ತಂಗುದಾಣ ಪಾಲನೆ ಪೋಷಣೆಗೆ ಬಿಟ್ಟಿರುತ್ತೇವೆ. ನಂತರ ಚಾಸಾ-1 ರವರು ಲಾವಣ್ಯ ಬಾಲ್ಯ ವಿವಾಹ ಆಗಿರುವ ಬಗ್ಗೆ ಒಪ್ಪಿಕೊಂಡಿರುವುದರಿಂದ ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದು ತಿಳಿಸಿರುತ್ತಾರೆ. 1 ನೇ ಆರೋಪಿ ಮತ್ತು ಚಾಸಾ-2 ರವರನ್ನು ನೋಡಿದಲ್ಲಿ ಗುರುತಿಸುತ್ತೇನೆ. ನಾನು ಪೋಲೀಸ್ ನವರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಎಸ್ ವೈ ಪಿ **ವಕೀಲರಿಂದ**

ಚಾಸಾ-1 ರವರು ನನಗೆ ಲಾವಣ್ಯ ರವರು ವಿಚಾರಣೆ ವೇಳೆ ಬಾಲ್ಯವಿವಾಹ ಆದ ಬಗ್ಗೆ ಒಪ್ಪಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರ ವಿರುದ್ಧ ಹೇಳಿರುವ ಎಲ್ಲ ಅಂಶಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಜೆ ಎಂ ಎಫ್ ಸಿ,** ಸಕಲೇಶಪುರ